ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ, ನ್ಯಾಯಾಲಯ ಅಂಕೋಲಾ

ಓ.ಎಸ್ ನಂಬರ 35/2019

ಪಿ ಡಬ್ಲ್ಯೂ- 3

ದಿಃ 22-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಉಮೇಶ್ ನಾಯಕ

ತಂದೆಯ ಹೆಸರುಃ ನಾರಾಯಣ ನಾಯಕ

ವಯಸ್ಸುಃ 69 ವರ್ಷ

ಉದ್ಯೋಗಃ ನಿವೃತ್ತ ರೆವೆನ್ಯೂ ಇಸ್ಪೆಕ್ಟರ್

ವಿಳಾಸಃ ಕಂಬರಕೇರಿ, ಅಂಕೋಲಾ

ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಎಂ.ಪಿ.ಬಿ ಯವರಿಂದಃ

ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ವಾದಿಯವರುನ್ನು ಗುರುತಿಸುತ್ತೇನೆ. ಅವರು ನಮ್ಮ ನೇರೆ ಹೊರೆಯವರಾಗಿರುತ್ತಾರೆ. ಅದೇ ರೀತಿ ಪ್ರತಿವಾದಿಯರನ್ನು ಸಹ ಗುರುತಿಸುತ್ತೆನೆ. ನಮ್ಮ ಮನೆಯು ಅವರ ಮನೆಯಿಂದ ಸುಮಾರು 15 ರಿಂದ 20 ಅಡಿ ದೂರವಾಗುತ್ತದೆ. ನಾನು ಸುಮಾರು 50 ವರ್ಷಗಳಿಂದ ವಾಸವಾಗಿರುತ್ತೆನೆ. ವಾದಿ ಮತ್ತು ಪ್ರತಿವಾದಿಯರ ಮನೆಯನ್ನು ನೋಡಿರುತ್ತೆನೆ. ವಾದಿ ಮತ್ತು ಪ್ರತಿವಾದಿಯ ಮನೆಯ ಮಧ್ಯದಲ್ಲಿ ಬಾವಿ ಇರುತ್ತದೆ. ಸದರಿ ಬಾವಿಯ ನೀರನ್ನು ಮೊದಲು ಒಬ್ಬ ವೆಂಕಟರಮಣ ಶೆಟ್ಟಿ ಇವರು ಉಪಯೋಗಿಸುತ್ತಿದ್ದು, ಈಗ ವಾದಿ ಮತ್ತು ಪ್ರತಿವಾದಿಯರು ಉಪಯೋಗಿಸುತ್ತಾರೆ. ನನ್ನ ತಿಳುವಳಿಕೆಯ ಪ್ರಕಾರ ಬಾವಿಯ ನೀರನ್ನು ಆನಾದಿ ಕಾಲದಿಂದಲೂ ಉಪಯೋಗಿಸುತ್ತಾ ಬಂದಿರುತ್ತಾರೆ. ವಾದಿ ಪ್ರತಿವಾದಿಯರು ಸದರಿ ಬಾವಿಯ ನೀರನ್ನು ಗಿಡ ಮರ ಮತ್ತು ಮನೆ ಬಳಕೆಗೆ ಉಪಯೋಗಿಸುತ್ತಾರೆ. ಬಾವಿಯ ನೀರನ್ನು ತೆಗೆದುಕೊಳ್ಳುವುದಕ್ಕೆ ಹಗ್ಗ ಹಾಗೂ ಪಂಪನ್ನು ಉಪಯೋಗಿಸುತ್ತಾರೆ. ನನ್ನ ತಿಳುವಳಿಕೆಯ ಪ್ರಕಾರ ಸದರಿ ಬಾವಿಯ ನೀರನ್ನು ವಾದಿ ಮತ್ತು ಪ್ರತಿವಾದಿಯರು ಉಪಯೋಗಿಸುತ್ತಿದ್ದಾರೆ.

(ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದುಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ ಎಂ ಎಫ ಸಿ, ಅಂಕೋಲಾ.